ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 104/2023

| | | |
|---|---|---|
| ಹೆಸರು | - | ಗೋಪಾಲ |
| ತಂದೆಯ ಹೆಸರು | - | ಶೇಖರ ನಾಯ್ಕ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಬ್ಯೂಸಿನೆಸ್ |
| ವಾಸ್ತವ್ಯ | - | ಹಳೇ ಹೆರವಟ್ಟಾ, ಕುಮಟಾ. |

<u>- ದಂಡ ಪಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ -</u>

<u>ಪ್ರಶ್ನೆ - 1</u> ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

<u>ಉತ್ತರ -</u>

**<u>ಪ್ರಶ್ನೆ - 2</u>** ಪಿ ಡಬ್ಲ್ಯೂ 1 - ಪ್ರಶಾಂತ ಗಣೇಶ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಸಾಯಿಬಾಬಾ ನವೋದಯ ಸಂಘ, ಪೈರಗದ್ದೆ, ಕುಮಟಾ ಇದರ ಸದಸ್ಯರಾಗಿದ್ದು , ಸದರ ಸಂಘದ ಸದಸ್ಯರ ಪೈಕಿ ಸದಸ್ಯರೇ ಸದರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಎಂತಾ ಆಯ್ಕೆಗೊಂಡಿದ್ದು ಸದರ ಸಂಘದ ಸದಸ್ಯರ ಹಾಗೂ ಸದರ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಹಾಗೂ ಸದಸ್ಯರಿಗೆ ಅಧಿಕಾರ ನೀಡಿದಂತೆ ಸದರ ಸಾಯಿಬಾಬಾ ನವೋದಯ ಸಂಘ ಪೈರಗದ್ದೆ ಕುಮಟಾ ಇದರ ಹೆಸರಿನಲ್ಲಿ ಸದರ ಸಂಘದವರು ದಿಃ 11-12-2019 ರಂದು ರೂ. 2,75,000/-ಗಳನ್ನು ಸಾಲವಾಗಿ ನೀಡುವಂತೆ ಸಾಲದ ಅರ್ಜಿ ಸಲ್ಲಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**ಪ್ರಶ್ನೆ – 3** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದ್ರಿ ಸಾಲದ ಅರ್ಜಿಯನ್ನು ಅವರ ಸಹಕಾರಿಯವರು ಪರಿಶೀಲಿಸಿ ದಿಃ 12-12-2019 ರಂದು ಜರುಗಿದ ಕಾರ್ಯಕಾರಿ ಸಮಿತಿ ಸಭೆ ಠರಾವು ನಂ . 1 ನೇದರಂತೆ ರೂ. 2,75,000/- ಗಳನ್ನು ಸಾಲವಾಗಿ ಮಂಜೂರು ಮಾಡಿದಂತೆ ಸದ್ರಿ ಸಂಘವು ದಿಃ 16-12-2019 ರಂದು ಸಾಲವಾಗಿ ಪಡೆದುಕೊಂಡಿದ್ದು ಇರುತ್ತಿದ್ದು ಸದ್ರಿ ಸಾಲಕ್ಕೆ ನೀವು ಹಾಗೂ ಸತೀಷ ದಾಮೋದರ ನಾಯ್ಕ ಇವರು ವೈಯಕ್ತಿಕ ನಾತೆಯಿಂದ ವ ಸದಸ್ಯ ನಾತೆಯಿಂದ ಜಾಮೀನುದಾರರಾಗಿದ್ದು ಸದರ ಸಾಲ ಪಡೆಯುವಾಗ ಅವರ ಸಂಸ್ಥೆಗೆ ಸಾಲಗಾರ ಹಾಗೂ ಜಾಮೀನುದಾರರು ದಾಖಲೆಗಳನ್ನು ಬರೆಸಿಕೊಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**ಪ್ರಶ್ನೆ – 4** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದ್ರಿ ಸಂಘದ ಸದಸ್ಯರು ಸದ್ರಿ ಸಾಲದ ಮರು ಪಾವತಿಯ ಜವಾಬುದಾರಿ ಹೊಂದಿದ್ದು ಇರುತ್ತದೆ ಆದರೆ ಸದರ ಸಾಲದ ದಾಖಲೆಗಳಂತೆ ಸದರ ಸಾಲದ ರಖಂನ್ನು ನಿಯತವಾಗಿ ಮಾತಿನಂತೆ ಮರುಪಾವತಿ ಮಾಡಿ ಬರದೇ ಇದ್ದುದರಿಂದ ಸದರ ಸಾಲವು ಕಟಬಾಕೀಯಾಗಿರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**ಪ್ರಶ್ನೆ – 5** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಕಾರಣ ಅವರು ಸದರಿ ಸಂಘದ ಸದಸ್ಯರನ್ನು ಹಾಗೂ ಪದಾಧಿಕಾರಿಗಳನ್ನು ಸಂಪರ್ಕಿಸಿ ಅವರ ಸಂಸ್ಥೆಗೆ ವಸೂಲು ಬರತಕ್ಕ ಸಾಲದ ರಖಂನ್ನು ವಸೂಲ ಕೊಡುವಂತೆ ವಿನಂತಿಸಿದಾಗ ನೀವು ಅವರ ಸಂಸ್ಥೆಗೆ ಬಂದು ಸದರ ಸಾಲದ ಕುರಿತು ವಸೂಲ ಕೊಡತಕ್ಕ ರಖಂ ಪೈಕಿ ರೂ . 3,22,773/-ಗಳನ್ನು ವಸೂಲ ಕೊಡುತ್ತೇನೆ ಆದರೆ ಸದರ ರಖಂನ್ನು ನಗದಾಗಿ ಸಂದಾಯ ಮಾಡಲು ಕೈಯಲ್ಲಿ ನಗದಾಗಿ ರಖಂ ಇಲ್ಲದೇ ಇರುವುದರಿಂದ ಚೆಕ್ ನ್ನು ಕೊಡುತ್ತೇನೆ ನೀವು ಸದರ ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸಿ ರಖಂ ಪಡೆದುಕೊಳ್ಳಿರಿ ಎಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ ಶಾಖಾ ಕುಮಟಾ ಇದರ ಚೆಕ್ ನಂ.639491 ರೂ. 3,22,773/- ತಾಃ

03-08-2021 ನೇದನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 6** ಪಿ ಡಬ್ಲ್ಯೂ 1 - ಇವರು ಮುಂದುವರಿದು , ನಿಮ್ಮ ಮಾತಿನ ಮೇರೆಗೆ ಅವರ ಸಹಕಾರಿಯವರು ಸದರ ಚೆಕ್ ನ್ನು ಕಲೆಕ್ಷನ್ ಗಾಗಿ ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ಸದರ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ಸದರ ಚೆಕ್ ನಗದೀಕರಣವಾಗದೇ ಮರಳಿ ಬಂದಿದ್ದು ಇರುತ್ತದೆ ಎಂತಾ ಬ್ಯಾಂಕರರು ದಿಃ 03-08-2021 ರಂದು ತಿಳಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 7** ಪಿ ಡಬ್ಲ್ಯೂ 1 - ಇವರು ಮುಂದುವರಿದು , ಕಾರಣ ಸ್ತ್ರೀ ಸಂಘವು ಪಡೆದ ಸಾಲದ ಕುರಿತು ನೀವು ಸದಸ್ಯನಾತೆಯಿಂದ ಹಾಗೂ ವೈಯಕ್ತಿಕವಾಗಿ ಜಾಮೀನುದಾರರಾಗಿರುವುದರಿಂದ ಸ್ತ್ರೀ ಸಾಲದ ರಖಂ ವಸೂಲ ನೀಡಲು ನೀವು ಜವಾಬುದಾರರಾಗಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 8** ಪಿಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬುದು ಗೊತ್ತಿರುತ್ತಾ ಸಾಲದ ಕುರಿತು ಕೊಡತಕ್ಕ ಈ ಮೇಲೆ ವಿವರಿಸಿದ ಚೆಕ್ ರಖಂನ್ನು ಕೊಡದೇ ತಪ್ಪಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಮೋಸ ಪಡಿಸಬೇಕೆಂಬ ಇರಾದೆಯಿಂದ ಬೋಗಸ್ ಚೆಕ್ ನ್ನು ನೀಡಿ ಎನ್ ಆಯ್ ಎಕ್ಟ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 9</u>** ಪಿ ಡಬ್ಲ್ಯೂ 1 -ಇವರು ಮುಂದುವರಿದು , ಕಾರಣ ಈ ಕುರಿತು ಅವರ ಸಹಕಾರಿಯವರು ಅವರ ವಕೀಲರ ಮೂಲಕ ದಿಃ 16-8-2021 ರಂದು ನೋಂದಾಯಿತ ಅಂಚೆ ನೋಟಿಸು ಕೊಡಿಸಿ ಸದರ ನೋಟಿಸು ಜ್ಯಾರಿಯಾದ 15 ದಿವಸದೊಳಗಾಗಿ ಸದರ ಚೆಕ್ ರಖಂನ್ನು ವಸೂಲ ಕೊಡಿಸುವಂತೆ ಮಾಗಣಿ ಮಾಡಿ ಕಳಿಸಿದ ನೋಟಿಸು ನಿಮಗೆ ತಾಃ 17-08-2021 ರಂದು ಜ್ಯಾರಿಯಾಗಿರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 10</u>** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಆದಾಗ್ಯೂ ಕೂಡಾ ನೀವು ಸದರ ನೋಟಿಸಿಗೆ ಉತ್ತರ ನೀಡಿದ್ದಾಗಲೀ ಚೆಕ್ ರಖಂ ವಸೂಲ ನೀಡಿದ್ದಾಗಲೀ ಇರುವುದಿಲ್ಲಾ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 11</u>** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

<u>ಉತ್ತರ –</u>

**<u>ಪ್ರಶ್ನೆ – 12</u>** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

<u>ಉತ್ತರ –</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 06-02-2026.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ